ಸಿವಿಲ್ ಮಿಸ್.ನಂ.10/2021

ಪಿ.ಡಬ್ಲ್ಯೂ.1

**ಸಾಕ್ಷಿಯನ್ನು ಇಂದು ದಿನಾಂಕಃ 13.07.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತ್ಯರ್ಜಿದಾರರ ಪರ ಶ್ರೀ ಎ.ಡಬ್ಲ್ಯೂ.ಎ. ವಕೀಲರಿಂದ.**

ನಾನು ಈ ಮುಂಚೆ ಡಿಕ್ರಿ ಪಾಲನೆ ಮಾಡದೇ ಇದ್ದ ಕಾರಣ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಡಿಕ್ರಿ ಆದ ನಂತರಡಿಕ್ರಿಯನ್ನು ಅಮಲ್ಜಾರಿ ಮಾಡಲು ಅರ್ಜಿ ಸಲ್ಲಿಸಿರುವುದಿಲ್ಲ. ಡಿಕ್ರಿಯಾದ ನಂತರ ಪಂಚಾಯತಿ ಮಾಡಿದರೂ ಎದುರುದಾರರು ಒಪ್ಪಿಕೊಂಡಿರುವುದಿಲ್ಲ. ಸದರಿ ಪಂಚಾಯತಿಯಲ್ಲಿ ಯಾವುದೇ ರಾಜಿ ಆಗಿರುವುದಿಲ್ಲ, ಎದುರುದಾರರು 2ನೇ ಹಾಗೂ 4ನೇ ಎದುರುದಾರರು ಕಲಬುರಗಿಯಲ್ಲಿ ಇರುತ್ತಾರೆ 1ನೇ ಮತ್ತು 3ನೇ ಎದುರುದಾರರು ಊರಲ್ಲಿ ಇರುತ್ತಾರೆ. 6ನೇ ಎದುರುದಾರರು ಇಂದು ನ್ಯಾಯಾಲಯದಲ್ಲಿ ಇದ್ದು ಅವರ ಹೆಸರು ಪ್ರದೀಪ ಎಂದರೆ ಸರಿ. 6ನೆ ಎದುರುದಾರರು ಕಲಬುರಗಿಯಲ್ಲಿ ವಕಾಲತ್ತು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರು ದೇವೆಂದ್ರಪ್ಪ ಹಾಗೂ ಅವರ ಮಕ್ಕಳು ವಿ.ಕೆ.ಸಲಗರದಲ್ಲಿ ಗೌಠಾನ ಎರಿಯಾದಲ್ಲಿ ಅವರ ಮನೆ ಇರುತ್ತದೆ ಎಂದರೆ ಸರಿ. ಹೊಲದ ಸರ್ವೆ ನಂ.288 ಇರುತ್ತದೆ. ಹೊಲದ ಉತ್ತರ ದಿಕ್ಕಿಗೆ ಎದುರುದಾರರ ಮನೆ ಇರುತ್ತದೆ. ಸರ್ವೆ ನಂ.288 ರಲ್ಲಿ ಆಳಂದ ಮಹಾಗಾಂವ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. ಮುಂಚೆ ರಸ್ತೆ 20 ಅಡಿ ಇತ್ತು ಎಂದರ ಸರಿ. ಈಗ ಸದರಿ ರಸ್ತೆ ದೊಡ್ಡ ರಸ್ತೆ ಆಗಿ ಹೆದ್ದಾರಿಯಾಗಿದೆ ಎಂದರೆ ಸಾಕ್ಷಿ ಇನ್ನು ಹೆದ್ದಾರಿ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಹೆದ್ದಾರಿ ಅಳತೆಯನ್ನು ಸರ್ಕಾರದವರು ಮಾಡಿಕೊಂಡು ಹೋಗಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಎರಡು ಕಡೆ 75 ಮೀಟರ ಅಳತೆಯ ಹೆದ್ದಾರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದೊಡ್ಡ ವಾಹನಗಳು ಸದರಿ ರಸ್ತೆಯಲ್ಲಿ ಓಡಾಡುತ್ತವೆ ಎಂದರೆ ಸರಿ. ಹೆದ್ದಾರಿಯ ಎರಡು ಕಡೆ ಉತ್ತರ ದಿಕ್ಕಿಗೆ ಹಾಗೂ ದಕ್ಷಿಣ ದಿಕ್ಕಿಗೆ ಮನೆಗಳು ಆಗಿರುತ್ತವೆ ಎಂದರೆ ಉತ್ತರ ದಿಕ್ಕಿಗೆ ನಮ್ಮ ಮನೆಗಳು ಇರುತ್ತವೆ ಎಂದು ಹೇಳುತ್ತಾರೆ. ನಮ್ಮ ಮನೆಗಳು ನಮ್ಮ ಸರ್ವೆ ನಂಬರಗಳಲ್ಲಿ ಇರುತ್ತವೆ. ಎದುರುದಾರರ ಮನೆಯವರಗೂ ಹೆದ್ದಾರಿಯ ಸೀಮೆ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರರ ಮನೆಯ ದಕ್ಷಿಣ ದಿಕ್ಕಿಗೆ ಜನರು ಓಡಾಡುತ್ತಾರೆ ಎಂದರ ಸರಿಯಲ್ಲ. ಎದುರುದಾರರ ಮನೆಯವರೆಗೂ ಸರ್ವೆ ನಂ.288 ಸರ್ಕಾರದ ಕಬ್ಜೆಯಲ್ಲಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರ ಮನೆಯ ಪಕ್ಕ ಸಾರ್ವಜನಿಕ ರಸ್ತೆ ಇದೆ ಎಂದರ ಸರಿಯಲ್ಲ ಸರ್ವೆ ನಂ.288 ದಾಟಿ ಇರುತ್ತದೆ ಎಂದು ಹೇಳುತ್ತಾರೆ. ಎದುರುದಾರರು ಡಿಕ್ರಿ ಉಲ್ಲಂಘನೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ಸ್ವಲ್ಪ ದಿನ ಬಿಟ್ಟು ಮತ್ತೇ ಕಲ್ಲು ಹಾಗೂ ಮುಳ್ಳುಗಳನ್ನು ಹಾಕುತ್ತಿದ್ದಾರೆ ಎಂದು ಹೇಳುತ್ತಾರೆ. ನ್ಯಾಯಾಲಯದ ಆದೇಶ ಆದ ನಂತರ ಎದುರುದಾರರು ಮುಳ್ಳು ಹಾಗೂ ಕಟ್ಟಿಗೆಗಳನ್ನು ಒಂದು ವರ್ಷಗಳ ಕಾಲ ತೆಗೆದು ನಂತರ ಮತ್ತೇ ಹಾಕಿರುತ್ತಾರೆ. ಎದುರುದಾರರು ಒಂದು ವರ್ಷದ ನಂತರದಿಂದ ಇಲ್ಲಿಯವರೆಗೂ ಮುಳ್ಳು ಕಟ್ಟಿಗೆಗಳನ್ನು ಹಾಕಿರುತ್ತಾರ ಎಂದರೆ ಸಾಕ್ಷಿ ಸ್ವಲ್ಪ ದಿನ ಹಾಕುವುದು ತೆಗೆಯುವುದು ಮಾಡುತ್ತಾರೆ ಎಂದು ಹೇಳುತ್ತಾರೆ. 7-8 ವರ್ಷಗಳಿಂದ ಕಟ್ಟಿಗೆ ಹಾಗೂ ಮುಳ್ಳು ಹಾಕುವುದನ್ನು ಹೆಚ್ಚು

ಮಾಡಿರುತ್ತಾರೆ ಎಂದು ಹೇಳುತ್ತಾರೆ. ಎದುರುದಾರರ ಮನೆಗೆ ಹತ್ತಿಕೊಂಡು ನನ್ನ ಮನೆ ಇರುವುದಿಲ್ಲ ಹಾಗೂ ಅಲ್ಲಿ ಕಟ್ಟಿಗೆ ಹಾಗೂ ಮುಳ್ಳುಗಳನ್ನು ಹಾಕುತ್ತಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ನೀಡಲು ಪದೇ ಪದೇ ಪ್ರಕರಣಗಳನ್ನು ದಾಖಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮುಂಚೆಯೂ ಸಹ ನಾನು ಸಿವಿಲ್ ಮಿಸಲೇನಿಯಸ ನಂ.10/2008 ದಾಖಲಿಸಿದ್ದೆ ಎಂದರೆ ಸರಿಯಲ್ಲ. ಈ ಮುಂಚೆ ಸಲ್ಲಿಸಿದ ಮಿಸಲೇನಿಯಸ ವಜಾ ಗೊಂಡಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ಡಿಕ್ರಿ ಉಲ್ಲಂಘನೆ ಮಾಡಿರುತ್ತಾರೆ ಎಂದು ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.